2017 ಕ.ತೀ.ವ. 493

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್
## ಹಾಗೂ
## ಸನ್ಮಾನ್ಯ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ

**ಡಿ.ಜಿ. ಮಂಜುನಾಥ್ –ವಿರುದ್ಧ– ಕರ್ನಾಟಕ ಲೋಕಾಯುಕ್ತ ಮತ್ತು ಇತರರು ***

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ಅರ್ಜಿದಾರರ ವಿರುದ್ಧ ಮೊದಲನೇ ಎದುರುದಾರರು ನೀಡಿದ ಆದೇಶ ಹಾಗೂ ಅವರ ವಿರುದ್ಧ ಆರಂಭಿಸಿದ ವಿಚಾರಣಾ ನಡಾವಳಿಗಳನ್ನು ರದ್ದುಗೊಳಿಸುವಂತೆ ಕೋರಿ ಸದರಿ ರಿಟ್ ಅರ್ಜಿ.

ಸರ್ವೋಚ್ಚ ನ್ಯಾಯಾಲಯದ *ಅಜಿತ್ ಕುಮಾರ್ ನಾಗ್ –ವಿರುದ್ಧ– ಜನರಲ್ ಮ್ಯಾನೇಜರ್ (ಪಿಜೆ), ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿ. – (2005) 7 ಎಸ್‌ಸಿಸಿ 764* ಪ್ರಕರಣವನ್ನು ಆಧರಿಸಿದ ಉಚ್ಚ ನ್ಯಾಯಾಲಯವು ಅರ್ಜಿದಾರರನ್ನು ಕ್ರಿಮಿನಲ್ ಪ್ರಕರಣದಿಂದ ಖುಲಾಸೆಗೊಂಡ ಕಾರಣಕ್ಕೆ ಅವರ ವಿರುದ್ಧ ವಿಚಾರಣಾ ನಡಾವಳಿಗಳನ್ನು ಶಿಸ್ತುಪಾಲನಾ ಪ್ರಾಧಿಕಾರವು ಮಾಡುವಲ್ಲಿ ತಡೆಯಲಾಗದೆಂದು ಅಭಿಪ್ರಾಯಪಟ್ಟು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. (2005) 7 ಎಸ್‌ಸಿಸಿ 764 ಅಜಿತ್ ಕುಮಾರ್ ನಾಗ್ –ವಿರುದ್ಧ– ಜನರಲ್ ಮ್ಯಾನೇಜರ್ (ಪಿಜೆ), ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿ.* | *(ಉಲ್ಲೇ) 1* |

* ರಿಟ್ ಅರ್ಜಿ ಸಂಖ್ಯೆ.: 36761/2014 (ಜಿಎಂ–ಕೆಎಲ್ಎ), ದಿನಾಂಕ: 11ನೇ ಜನವರಿ, 2017.

2. *(2006) 5 ಎಸ್‌ಸಿಸಿ 446*
*ಜಿ.ಎಂ. ಟ್ಯಾಂಕ್ –ವಿರುದ್ಧ– ಗುಜರಾತ್ ರಾಜ್ಯ* *(ಉಲ್ಲೇ) 3*
3. *ಐಎಲ್‌ಆರ್ 2009 ಕೆಎಆರ್ 2008*
*ನಂಜುಂಡ ಮತ್ತು ಇತರರು –ವಿರುದ್ಧ–*
*ಶ್ರೀ ಚಾಮರಾಜೇಂದ್ರ ಜೂಲಾಜಿಕಲ್ ಗಾರ್ಡನ್*
*ಮತ್ತು ಇತರರು* *(ಉಲ್ಲೇ) 3*
4. *1981 (2) ಎಲ್‌ಎಲ್‌ಜೆ 410*
*ಎಚ್.ಐ. ಖಾಜಿ –ವಿರುದ್ಧ– ಜೆ.ಸಿ. ಅಗರ್‌ವಾಲ್* *(ಉಲ್ಲೇ) 3*

ಅರ್ಜಿದಾರರ ಪರ : ಶ್ರೀ ರವಿ ಎಚ್.ಕೆ. ವಕೀಲರು ;
1 ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀ ಜಿ. ಮಲ್ಲಿಕಾರ್ಜುನಪ್ಪ, ವಕೀಲರು;
3ನೇ ಪ್ರತ್ಯರ್ಜಿದಾರರ ಪರ : ಶ್ರೀ ಸಿ. ಜಗದೀಶ್ ;
4ನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಲಾಗಿದೆ.

## ಆಜ್ಞೆ

**ನ್ಯಾಯಮೂರ್ತಿ ಎಚ್.ಜಿ. ರಮೇಶ್ (ಮೌಖಿಕ) :**

1. ಕ್ರಿಮಿನಲ್ ಪ್ರಕರಣವನ್ನು ಎದುರಿಸುತ್ತಿರುವ ಉದ್ಯೋಗಿಯ ಖುಲಾಸೆಯು, ಕ್ರಿಮಿನಲ್ ಪ್ರಕರಣದಲ್ಲಿ ಆತನ ವಿರುದ್ಧ ಮಾಡಲಾಗಿದ್ದ ಸದರಿ ಆರೋಪಗಳ ಮೇಲೆ ಸೇವಾ ನಿಯಮಗಳ ಮೇರೆಗೆ ಆತನ ವಿರುದ್ಧ ಶಿಸ್ತುಪಾಲನಾ ವಿಚಾರಣೆಯನ್ನು ನಡೆಸುವುದರಿಂದ ಶಿಸ್ತುಪಾಲನಾ ಪ್ರಾಧಿಕಾರವನ್ನು ಪ್ರತಿವಾರಿಸುತ್ತದೆಯೇ ಎಂಬ ಪ್ರಶ್ನೆಯನ್ನು ಈ ಪ್ರಕರಣದಲ್ಲಿ ಪರಿಗಣಿಸಬೇಕಾಗಿರುತ್ತದೆ. ಸದರಿ ಪ್ರಶ್ನೆಗೆ ***ಅಜಿತ್ ಕುಮಾರ್ ನಾಗ್ –ವಿರುದ್ಧ– ಜನರಲ್ ಮ್ಯಾನೇಜರ್ (ಪಿಜೆ), ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿ.*** [1] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ

1. (2005) 7 ಎಸ್‌ಸಿಸಿ 764

ತ್ರಿಸದಸ್ಯ ಪೀಠದ ನ್ಯಾಯಾಧೀಶರುಗಳು ವಿಧಿಸಿರುವ ಕಾನೂನಿಗನುಸಾರವಾಗಿ ನಕಾರಾತ್ಮಕವಾಗಿಯೇ ಉತ್ತರಿಸಲಾಗಿರುತ್ತದೆ.

2. ಈ ರಿಟ್ ಅರ್ಜಿಯಲ್ಲಿ, ಅರ್ಜಿದಾರನ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ವಿಚಾರಣಾಧಿಕಾರಿಯನ್ನು ನಾಮ ನಿರ್ದೇಶಿಸಿ ಕರ್ನಾಟಕ ರಾಜ್ಯದ ಉಪಲೋಕಾಯುಕ್ತ–1 ರವರು 17.5.2012ರಂದು (ಅನುಬಂಧ–ಡಿ) ಹೊರಡಿಸಿದ ಆದೇಶವನ್ನು ಅರ್ಜಿದಾರರು ಪ್ರಶ್ನಿಸಿರುತ್ತಾರೆ. ಆದೇಶವು ಈ ಮುಂದಿನಂತಿರುತ್ತದೆ:

> "ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 14–ಎ ನಿಯಮದಡಿಯಲ್ಲಿ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಹಾಗೂ ಮೇಲೆ ಓದಿದ ಆದೇಶಗಳನ್ನು ಅನುಸರಿಸಿ ನ್ಯಾಯಮೂರ್ತಿ ಎಸ್.ಬಿ. ಮಜಗೆ, ಉಪಲೋಕಾಯುಕ್ತ–1 ಕರ್ನಾಟಕ ರಾಜ್ಯ ಆದ ನಾನು ಮೇಲೆ ಹೇಳಿದ ನೌಕರ/ರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಿ, ಆರೋಪಗಳನ್ನು ಪಟ್ಟಿ ಮಾಡಲು ವಿಚಾರಣಾ ಅಧಿಕಾರಿಯಾಗಿ ಹೆಚ್ಚುವರಿ ವಿಚಾರಣಾ ರಿಜಿಸ್ಟ್ರಾರ್–4 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರನ್ನು ಈ ಮೂಲಕ ನಾಮನಿರ್ದೇಶನ ಮಾಡಿರುತ್ತೇನೆ."

ಮೇಲಿನ ಆದೇಶವನ್ನು ಅನುಸರಿಸಿ, 28.05.2012ರಂದು ಆರೋಪ ಪಟ್ಟಿ (ಅನುಬಂಧ–ಇ)ಗಳ ಪ್ರಕಾರ ಕರ್ನಾಟಕ ಲೋಕಾಯುಕ್ತದ ಹೆಚ್ಚುವರಿ ವಿಚಾರಣಾ ರಿಜಿಸ್ಟ್ರಾರ್–4 ರವರು ಅರ್ಜಿದಾರರ ವಿರುದ್ಧ ಈ ಮುಂದಿನ ಆರೋಪವನ್ನು ರೂಪಿಸಲಾಗಿರುತ್ತದೆ.

> "ಶ್ರೀ ಡಿ.ಜಿ. ಮಂಜುನಾಥ್, ಡಿ.ಸಿ.ಓ ಆದ ನೀವು, ದಾವಣಗೆರೆ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ

ಪಂಗಡಗಳ ಅಭಿವೃದ್ಧಿ ನಿಗಮದ ಕಚೇರಿಯಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವಾಗ, ದೂರುದಾರರು ಅಂದರೆ ಹನುಮಂತಪ್ಪನವರ ಮಗ ಜಿ.ಎಚ್. ವಸಂತ ಎಂಬುವವರು 19.11.2005ರಂದು ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಎರಡು ಹಸುಗಳನ್ನು ಖರೀದಿಸಲು ಸಾಲ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಇವರ ಅರ್ಜಿಯು, ಪರಿಶೀಲನೆಯ ತರುವಾಯ ವರದಿ ಸಿದ್ಧಪಡಿಸಲು ತಮ್ಮ ಬಳಿಗೆ ಬಂದಿರುತ್ತದೆ. ಆದರೆ ತಾವು ಯಾವುದೇ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಅಥವಾ ದಿನಾಂಕ 29.12.2005ರ ವರೆಗೆ ಯಾವುದೇ ವರದಿಯನ್ನು ಸಿದ್ಧಪಡಿಸಿರುವುದಿಲ್ಲ. ಅಧಿಕಾರದ ಬಲದಿಂದ ದಿನಾಂಕ 29.12.2005ರಂದು ದೂರುದಾರರಿಂದ 500/– ರೂ.ಗಳ ಲಂಚ ತೆಗೆದುಕೊಂಡಿರುವುದು, ಕರ್ತವ್ಯದ ನಿರುಪಾಧಿಕ ಅಖಂಡತೆ ಮತ್ತು ಪಾವಿತ್ರತೆಯನ್ನು ಕಾಪಾಡುವಲ್ಲಿ ವಿಫಲವಾಗಿದ್ದು, ಈ ಕೃತ್ಯವು ಸರ್ಕಾರಿ ನೌಕರರಿಗೆ ಶೋಭೆ ತರುವಂಥದ್ದಾಗಿರುವುದಿಲ್ಲ. ಈ ಕೃತ್ಯವನ್ನು ಎಸಗುವ ಮೂಲಕ ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 3(1)(i) ರಿಂದ (iii) ಪ್ರಕರಣಗಳಡಿಯಲ್ಲಿ ನಿರೂಪಿಸಲಾದಂಥ ದುರ್ನಡತೆಯನ್ನು ಎಸಗಿದಂತಾಗಿರುತ್ತದೆ".

3. ಅರ್ಜಿದಾರರ ಪರ ಮಾನ್ಯ ವಕೀಲರು, ಅನುಬಂಧ–ಸಿ ಮೇರೆಗೆ ದಿನಾಂಕ 7.12.2010ರ ತೀರ್ಪಿನ ಮೂಲಕ ವಿಶೇಷ ಪ್ರಕರಣ (ಲೋಕಾಯುಕ್ತ) ಸಂ.4/2006ರಲ್ಲಿ ಕ್ರಿಮಿನಲ್ ನ್ಯಾಯಾಲಯದ ಮೂಲಕ ಇಲಾಖೆ ವಿಚಾರಣೆಯಲ್ಲಿ ರೂಪಿಸಿದ ಇಂತಹುದೇ ಆರೋಪದಿಂದ ಅರ್ಜಿದಾರರನ್ನು ಖುಲಾಸೆ ಮಾಡಿರುತ್ತಾರೆಂದು ವಾದಿಸಿ, ಈ ಹಿನ್ನೆಲೆಯಲ್ಲಿ ಇಂತಹುದೇ ಆರೋಪ ಕುರಿತಂತೆ ಅರ್ಜಿದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ನಿರ್ದೇಶಿಸಿರುವ ದಿನಾಂಕ 17.5.2012ರ

ಪ್ರಶ್ನಿತ ಆದೇಶವು ಕಾನೂನಿನ ಪ್ರಕಾರ ಅನೂರ್ಜಿತವಾದುದೆಂದೂ ಸಹ ವಾದಿಸಿರುತ್ತಾರೆ. ಈ ವಾದಕ್ಕೆ ಪೂರಕವಾಗಿ, ಅರ್ಜಿದಾರರ ಪರ ಮಾನ್ಯ ವಕೀಲರು, ಈ ಮುಂದಿನ ಮೂರು ತೀರ್ಪುಗಳನ್ನು ಉದಾಹರಿಸಿರುತ್ತಾರೆ:

1. ***ಜಿ.ಎಂ. ಟ್ಯಾಂಕ್ –ವಿರುದ್ಧ– ಗುಜರಾತ್ ರಾಜ್ಯ*** [2].

2. ***ನಂಜುಂಡ ಮತ್ತು ಇತರರು –ವಿರುದ್ಧ– ಶ್ರೀ ಚಾಮರಾಜೇಂದ್ರ ಜೂಲಾಜಿಕಲ್ ಗಾರ್ಡನ್ ಮತ್ತು ಇತರರು*** [3].

3. ***ಎಚ್.ಐ. ಖಾಜಿ –ವಿರುದ್ಧ– ಜೆ.ಸಿ. ಅಗರವಾಲ್*** [4].

4. ನಾವು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಉದಾಹರಿಸಿದ ಮೇಲಿನ ಮೂರು ತೀರ್ಪುಗಳ ಹಿನ್ನೆಲೆಯಲ್ಲಿ ಹಾಗೂ ***ಅಜಿತ್ ಕುಮಾರ್ ನಾಗ್ –ವಿರುದ್ಧ– ಜನರಲ್ ಮ್ಯಾನೇಜರ್ (ಪಿಜೆ), ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿ.*** ಸರ್ವೋಚ್ಚ ನ್ಯಾಯಾಲಯದ ತ್ರಿಸದಸ್ಯ ಪೀಠದ ನ್ಯಾಯಾಧೀಶರುಗಳು ನೀಡಿರುವ ತೀರ್ಪನ್ನು ಆಧರಿಸಿ ನಾವು ವಿಷಯವನ್ನು ಪರಿಶೀಲಿಸಿರುತ್ತೇವೆ. ನಮ್ಮ ಅಭಿಪ್ರಾಯದಲ್ಲಿ, ಅರ್ಜಿದಾರನು ಪ್ರಸ್ತಾಪಿಸಿರುವ ತೀರ್ಪಿನ ಪ್ರಶ್ನೆಗೆ, ಈತನಿಗೆ ವಿರುದ್ಧವಾಗಿಯೇ, ***ಅಜಿತ್ ಕುಮಾರ್ ನಾಗ್*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟವಾಗಿ ಉತ್ತರ ನೀಡಿದ್ದು, ಅದು ಈ ಮುಂದಿನಂತಿರುತ್ತದೆ:

> "11. ಕ್ರಿಮಿನಲ್ ನ್ಯಾಯಾಲಯವು ಅಪೀಲುದಾರನನ್ನು ಖುಲಾಸೆ ಮಾಡುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ,

2. (2006)5 ಎಸ್‌ಸಿಸಿ 446
3. ಐಎಲ್‌ಆರ್ 2009 ಕೆಎಆರ್ 2008
4. 1981 (2) ಎಲ್‌ಎಲ್‌ಜೆ 410

ನಮ್ಮ ಅಭಿಪ್ರಾಯದಲ್ಲಿ ಆದೇಶವು, ಅನ್ಯಥಾ ಅನುಮತೀಯವಾಗದಿದ್ದ ಪಕ್ಷದಲ್ಲಿ, ಕ್ರಮವನ್ನು ತೆಗೆದುಕೊಳ್ಳುವುದರಿಂದ ನಿಗಮವನ್ನು ಸದರಿ ಆದೇಶವು ಪ್ರತಿವಾದಿಸುವಂತಿರುವುದಿಲ್ಲ. ನಮ್ಮ ತೀರ್ಪಿನಲ್ಲಿ ಕಾನೂನನ್ನು ನ್ಯಾಯೋಚಿತವಾಗಿ ಇತ್ಯರ್ಥಪಡಿಸಿರುತ್ತೇವೆ. ಕ್ರಿಮಿನಲ್ ನ್ಯಾಯಾಲಯದಿಂದ ಆಗುವ ಖುಲಾಸೆಯು, ಜಾರಿಯಲ್ಲಿರುವ ನಿಯಮ ಮತ್ತು ನಿಬಂಧನೆಗಳಿಗನುಸಾರವಾಗಿ ಅಧಿಕಾರವನ್ನು ಚಲಾಯಿಸುವುದರಿಂದ ಉದ್ಯೋಗದಾತನನ್ನು ಅನರ್ಹಗೊಳಿಸುವಂತಿಲ್ಲ. ಕ್ರಿಮಿನಲ್ ಹಾಗೂ ಇಲಾಖಾ ವ್ಯವಹರಣೆಗಳೆರಡೂ ಸಂಪೂರ್ಣವಾಗಿ ಭಿನ್ನವಾಗಿರುತ್ತವೆ. ಅವು ಬೇರೆ ಬೇರೆ ಕ್ಷೇತ್ರಗಳಲ್ಲಿ ಬೇರೆ ಬೇರೆ ಉದ್ದೇಶಗಳನ್ನು ಇಟ್ಟುಕೊಂಡು ಕಾರ್ಯೋನ್ಮುಖವಾಗಿರುತ್ತವೆ. ಕ್ರಿಮಿನಲ್ ವಿಚಾರಣೆಯ ಉದ್ದೇಶವು ಅಪರಾಧಿಗೆ ಸೂಕ್ತ ಶಿಕ್ಷೆಯನ್ನು ವಿಧಿಸುವುದೇ ಆಗಿರುವುದರಿಂದ, ವಿಚಾರಣಾ ವ್ಯವಹರಣೆಗಳ ಉದ್ದೇಶವು ಇಲಾಖೆಯಿಂದಲೇ ಅಪರಾಧಿಯೊಂದಿಗೆ ವ್ಯವಹರಿಸಿ, ಸೇವಾ ನಿಯಮಗಳಿಗನುಸಾರವಾಗಿ ದಂಡವನ್ನು ವಿಧಿಸುವುದೇ ಆಗಿರುತ್ತದೆ. ಕ್ರಿಮಿನಲ್ ಅಧಿವಿಚಾರಣೆಯಲ್ಲಿ, ಕೆಲವು ಸಂದರ್ಭಗಳಲ್ಲಿ ಅಥವಾ ಕೆಲವು ಅಧಿಕಾರಿಗಳ ಮುಂದೆ ನೀಡಿದ ಅಪರಾಧದಲ್ಲಿ ಸಿಕ್ಕಿಸಿಹಾಕುವ ಹೇಳಿಕೆಗಳು ಸಾಕ್ಷ್ಯದಲ್ಲಿ ಸಂಪೂರ್ಣವಾಗಿ ಅನುಮತೀಯವಾಗಿರುವುದಿಲ್ಲ. ಅಂಥ ಕಟ್ಟುನಿಟ್ಟಾದ ಸಾಕ್ಷ್ಯದ ನಿಯಮಗಳು ಹಾಗೂ ನಡಾವಳಿಗಳು ಇಲಾಖಾ ನಡಾವಳಿಗಳಿಗೆ ಅನ್ವಯವಾಗುವುದಿಲ್ಲ. ಅಪರಾಧ ನಿರ್ಣಯದ ಆದೇಶಕ್ಕೆ ಅವಶ್ಯಕವಾಗಿರುವಂಥ ರುಜುವಾತಿನ ಪ್ರಮಾಣವು, ಕರ್ತವ್ಯಲೋಪವನ್ನು ಮಾಡಿರುವ ದಾಖಲೆಗೆ ಅವಶ್ಯಕವಾಗಿರುವ

ರುಜುವಾತಿನ ಪ್ರಮಾಣದಿಂದ ಭಿನ್ನವಾಗಿರುತ್ತದೆ. ಎರಡು ಕಾರ್ಯವಿಧಾನಗಳಲ್ಲಿನ ಸಾಕ್ಷ್ಯದ ವಿವರಣೆಗೆ ಸಂಬಂಧಿಸಿದ ನಿಯಮವು ಒಂದೇ ತೆರನಾಗಿರುವುದಿಲ್ಲ. ಕ್ರಿಮಿನಲ್ ಕಾನೂನಿನಲ್ಲಿ, ರುಜುವಾತಿನಭಾರ ಪ್ರಾಸಿಕ್ಯೂಷನ್ ಮೇಲೆಯೇ ಇರುತ್ತದೆ. ಹಾಗೂ "ಯುಕ್ತ ಸಂದೇಹವನ್ನು ಮೀರಿ" ಆಪಾದಿತನ ತಪ್ಪನ್ನು ಪ್ರಾಸಿಕ್ಯೂಷನ್ ರುಜುವಾತುಪಡಿಸಲು ಸಮರ್ಥವಾಗದ ಹೊರತು, ನ್ಯಾಯಾಲಯವು ಆತನನ್ನು ಅಪರಾಧ ನಿರ್ಣೀತನೆಂದು ತೀರ್ಪನ್ನು ನೀಡಲು ಸಾಧ್ಯವಾಗುವುದಿಲ್ಲ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಇಲಾಖಾ ವಿಚಾರಣೆಯಲ್ಲಿ, ಸಂಭಾವ್ಯತೆಯ ಬಾಹುಳ್ಯದ ಆಧಾರದ ಮೇಲೆ ದಾಖಲಾದ ತೀರ್ಪನ್ನು ಕುರಿತಂತೆ ಆಪಾದಿತ ಅಧಿಕಾರಿಯ ಮೇಲೆ ದಂಡವನ್ನು ವಿಧಿಸಬಹುದಾಗಿರುತ್ತದೆ. **ಆದ್ದರಿಂದ, ನ್ಯಾಯಿಕ ಮ್ಯಾಜಿಸ್ಟ್ರೇಟರಿಂದ ಅಪೀಲುದಾರನ ಅಪರಾಧ ನಿರ್ಣಯವನ್ನು ನಿಗಮದ ಶಿಸ್ತುಪಾಲನಾ ಅಧಿಕಾರ ವ್ಯಾಪ್ತಿಯಡಿಯಲ್ಲಿನ ಹೊಣೆಗಾರಿಕೆಯಿಂದ ಇವನನ್ನು ಅದೇ ಕಾರಣಕ್ಕಾಗಿ ವಿಮುಕ್ತಗೊಳಿಸಲಾಗುವುದಿಲ್ಲ. ಆದ್ದರಿಂದ, ನಾವು, ಈತನನ್ನು ಕ್ರಿಮಿನಲ್ ನ್ಯಾಯಾಲಯವು ನಿರಪರಾಧಿಯೆಂದು ನಿರ್ಣಯಿಸಿ, ಸೇವೆಯಿಂದ ವಜಾಗೊಳಿಸಿರುವ ಪ್ರಶ್ನಿತ ಆದೇಶವು ಸಮಾಪನಗೊಳಿಸಿ ರದ್ದುಪಡಿಸಲು ತಕ್ಕುದಾಗಿರುತ್ತದೆಂಬ ಅಪೀಲುದಾರನ ವಾದವನ್ನು ಎತ್ತಿಹಿಡಿಯಲು ಅಸಮರ್ಥರಾಗಿರುತ್ತೇವೆ**".

(ಇದಕ್ಕೆ ಒತ್ತು ನೀಡಲಾಗಿರುತ್ತದೆ)

5. ಮೇಲೆ ಉದ್ಧರಿಸಿದ ***ಅಜಿತ್ ಕುಮಾರ್ ನಾಗ್*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತ್ರಿಸದಸ್ಯ ಪೀಠದ ನ್ಯಾಯಾಧೀಶರು ಹೇಳಿರುವಂತೆ, ಉದ್ಯೋಗಿಗಳ ವಿರುದ್ಧದ ಕ್ರಿಮಿನಲ್ ನಡಾವಳಿಗಳನ್ನು ವಜಾ ಮಾಡುವುದು, ಸೇವಾ ನಿಯಮಗಳ

ಪ್ರಕಾರ ಶಿಸ್ತುಪಾಲನಾ ಅಧಿಕಾರವ್ಯಾಪ್ತಿಯಡಿಯಲ್ಲಿ ಉದ್ಭವಿಸಿದ ಹೊಣೆಗಾರಿಕೆಯಿಂದ ಅದೇ ಕಾರಣಕ್ಕಾಗಿ ವಿಮುಕ್ತಗೊಳಿಸಲಾಗುವುದಿಲ್ಲ. ಅದರಲ್ಲಿ ಹೇಳಿರುವ ಕಾರಣವು, ಸಾಕ್ಷ್ಯ ಹಾಗೂ ನಡಾವಳಿಯ ಕಟ್ಟುನಿಟ್ಟಾದ ನಿಯಮಗಳು ಇಲಾಖಾ ವಿಚಾರಣೆಗಳಿಗೆ ಅನ್ವಯವಾಗುವುದಿಲ್ಲವೆಂಬುದಾಗಿದೆ. ಎರಡೂ ನಡಾವಳಿಗಳಲ್ಲಿನ ಸಾಕ್ಷ್ಯದ ವಿವರಣೆಗೆ ಸಂಬಂಧಿಸಿದ ನಿಯಮವೂ ಸಹ ಸದೃಶವಾಗಿರುವುದಿಲ್ಲ. ಅಪರಾಧ ನಿರ್ಣಯದ ಆದೇಶಕ್ಕೆ ಅವಶ್ಯಕವಾಗಿರುವಂಥ ರುಜುವಾತಿನ ಪ್ರಮಾಣವು, ಕರ್ತವ್ಯ ಲೋಪವನ್ನು ಮಾಡಿರುವ ದಾಖಲೆಗೆ ಅವಶ್ಯಕವಾಗಿರುವ ರುಜುವಾತಿನ ಪ್ರಮಾಣದಿಂದ ಭಿನ್ನವಾಗಿರುತ್ತದೆ. ಅಲ್ಲದೆ, ಕ್ರಿಮಿನಲ್ ಹಾಗೂ ಇಲಾಖೆಯ ಎರಡೂ ನಡಾವಳಿಗಳು, ಸಂಪೂರ್ಣವಾಗಿ ಭಿನ್ನವಾಗಿದ್ದು, ಅವು ಭಿನ್ನ ಕ್ಷೇತ್ರಗಳಲ್ಲಿ ಭಿನ್ನ ಉದ್ದೇಶಗಳಲ್ಲಿ ಕಾರ್ಯನಿತರವಾಗಿರುತ್ತವೆಂದೂ ಅಭಿಪ್ರಾಯಪಡಲಾಗಿರುತ್ತದೆ.

6. ಮೇಲೆ ಉದ್ಧರಿಸಿದ ***ಅಜಿತ್ ಕುಮಾರ್ ನಾಗ್*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ನಾವು, ಕ್ರಿಮಿನಲ್ ಪ್ರಕರಣದಲ್ಲಿನ ಅರ್ಜಿದಾರನ ಖುಲಾಸೆಯನ್ನು ಸೇವಾ ನಿಯಮಗಳ ಮೇರೆಗೆ ಶಿಸ್ತು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಡಿಯಲ್ಲಿ ಉದ್ಭವಿಸಿದ ಹೊಣೆಗಾರಿಕೆಯಿಂದ ಅದೇ ಕಾರಣಕ್ಕಾಗಿ ವಿಮುಕ್ತಗೊಳಿಸಬೇಕೆಂಬ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ನಾವು ನಿರಾಕರಿಸಿರುತ್ತೇವೆ. ನಮ್ಮ ಅಭಿಪ್ರಾಯದಲ್ಲಿ ಕ್ರಿಮಿನಲ್ ಪ್ರಕರಣದಲ್ಲಿನ ಅರ್ಜಿದಾರನ ಖುಲಾಸೆ ಮಾಡುವುದನ್ನು, ಕ್ರಿಮಿನಲ್ ಪ್ರಕರಣದಲ್ಲಿ ಆತನ ವಿರುದ್ಧ ಮಾಡಲಾದ ಅದೇ ಆರೋಪದ ಮೇಲೆ ಆತನ ವಿರುದ್ಧ ಶಿಸ್ತುಪಾಲನಾ ವಿಚಾರಣೆಯನ್ನು ನಡೆಸುವುದರಿಂದ ಶಿಸ್ತುಪಾಲನಾ ಪ್ರಾಧಿಕಾರವನ್ನು ಪ್ರತಿವಾರಿಸುವಂತಿಲ್ಲವೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ. ತದನುಸಾರವಾಗಿ, ರಿಟ್ ಅರ್ಜಿಯನ್ನು ವಜಾ ಮಾಡಲಾಗಿರುತ್ತದೆ.

ಅರ್ಜಿಯು ವಜಾಗೊಂಡಿರುತ್ತದೆ.

---